ಶ್ರೀ ಕೆ. ಮಲ್ಲಪ್ಪ.—ಆ ವಿಷಯದಲ್ಲಿ ಬೇಕಾದಷ್ಟು ಸಲಕರಣೆಗಳನ್ನು ಮತ್ತು ಸಿದ್ಧತೆಗಳನ್ನು ಈಗಾಗಲೇ ಮಾಡಿದ್ದೇವೆ. ಮ್ಯಾಂಗನೀಸ್ ಅದುರು ಮಾನ್ಯ ಸದಸ್ಯರು ಹೇಳಿದಷ್ಟು ದೂರದಲ್ಲಿ ಸಿಕ್ಕುತ್ತದೆಂಬುದನ್ನು ಖಂಡಿತವಾಗಿ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಇನ್ನೊಂದು ಬಹಳ ಹತ್ತಿರದಲ್ಲಿ ದೊರಕುತ್ತದೆಂದು ಹೇಳಿರತಕ್ಕದ್ದು ತಪ್ಪಾಗಲಾರದು. ಯಾವುದೇ ಆಗಲೀ ಅದು ಎಷ್ಟು ಪ್ರಮಾಣದಲ್ಲಿ ಸಿಕ್ಕುತ್ತದೆಂಬುದನ್ನು ಮೊದಲು ನೋಡಬೇಕು. ಒಂದು ವೇಳೆ ಸಾಕಷ್ಟು ಪ್ರಮಾಣದಲ್ಲಿ ದೊರೆಯದೆ ಹೋದರೆ ಮಾಡಿದಂಥ ಕೆಲಸ ವ್ಯರ್ಥವಾಗುತ್ತದೆ. ಆ ಬಗ್ಗೆ ಈಗಾಗಲೇ ತನಿಖೆ ಯಾಗುತ್ತಿದೆ. ಕಬ್ಬಿಣದ ಅದುರಿಗೆ ಬೇಕಾದಷ್ಟು ಡಿಮ್ಯಾಂಡ್ ಇದೆ. ಆ ಡಿಮ್ಯಾಂಡನ್ನು ಪೂರೈಸದ ಹೊರತು ಏನು ಮಾಡುವುದಕ್ಕೂ ಆಗುವುದಿಲ್ಲ. ಹತ್ತಿರ ಪ್ರದೇಶದಲ್ಲಿ ಯಾವ ಪ್ರಮಾಣದಲ್ಲಿ ಯಾವ ಕ್ವಾಲಿಟಿ ಮತ್ತು ಮಿಶ್ರ ವನ್ನುಗಳು ಸಿಕ್ಕುತ್ತವೆಂಬುದನ್ನು ತನಿಖೆ ಮಾಡಿ ಒಳ್ಳೆಯ ಕ್ವಾಲಿಟಿ ಸಿಕ್ಕಿದರೆ ಅದನ್ನು ತೆಗೆದುಕೊಳ್ಳಬಹುದು ಸದ್ಯದಲ್ಲಿ ಮ್ಯಾಂಗನೀಸ್‌ಗೆ ಇರತಕ್ಕ ಡಿಮ್ಯಾಂಡ್ ಬಹಳ ಕಡಮೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಲ್ಲಿ ಮ್ಯಾಂಗನೀಸ್ ಅದುರು, ಮತ್ತು ಕಬ್ಬಿಣದ ಅದುರು ಹೇರಳವಾಗಿರುವುದರಿಂದ ಅಲ್ಲಿ ಸರ್ಕಾರದವರು ಒಂದು ಕಬ್ಬಿಣದ ಕಾರ್ಖಾನೆಯನ್ನು ಪ್ರಾರಂಭ ಮಾಡುವುದಕ್ಕೆ ಯೋಚನೆ ಮಾಡುತ್ತಾರೆಯೇ ?

ಅಧ್ಯಕ್ಷರು.—ಕಾರ್ಖಾನೆಗೆ ಬೇಕಾಗುವಷ್ಟು ಅದುರು ಅಲ್ಲಿ ಇಲ್ಲ.

ಶ್ರೀ ಕೆ. ಮಲ್ಲಪ್ಪ.—ಅಪ್ಪರ ಕೊಂಡದ ಹತ್ತಿರ ಸಿಕ್ಕತಕ್ಕಂಥ ಕಬ್ಬಿಣದ ಅದುರು ಏನಿದೆಯೋ ಅದು ಬಹಳ ಕಡಮೆ ದರ್ಜೆಯ ಅದುರು. ಅದು ತೀರ ಪ್ರದೇಶದ ಹತ್ತಿರ ಇರುವುದರಿಂದ ಅದು ಪರದೇಶಕ್ಕೆ ಸಾಗಿಸುವುದಕ್ಕೆ ಅನುಕೂಲವಾದಂತಹ ಅದುರೇ ಏನಾ ಕಬ್ಬಿಣ ಕಾರ್ಖಾನೆಯನ್ನು ತೆರೆಯುವುದಕ್ಕೆ ಲಾಯಕ್ಕಾದ ಅದುರು ಅಲ್ಲ.

ಶ್ರೀ ಎಸ್. ಪಿ. ಘಾಯದೆ.—ಕಾರವಾರ ಡಿಸ್ಟ್ರಿಕ್ಟಿನಲ್ಲಿ ನಾನಾ ವಿಧವಾದ ಖನಿಜಗಳು ಸಿಕ್ಕುತ್ತಾ ಇರುವುದರಿಂದ ಅದನ್ನು ಉಪಯೋಗ ಮಾಡಿಕೊಂಡು ಯಾವುದಾದರೂ ಒಂದು ಕೈಗಾರಿಕೆ ತೆರೆಯುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ಕಾರವಾರದಲ್ಲಿ ಒಂದು ಅಲ್ಯೂಮಿನಿಯಮ್ ಕೈಗಾರಿಕೆಯನ್ನು ತೆರೆಯುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ.

Laying of a Railway line *via* Kadur-Chickmagalur-Mudigere-Sakaleshpura to link Hassan-Mangalore Railway.

*Q.—190. Smt. B. L. SUBBAMMA (Chickmagalur).—

Will the Government be pleased to state :—

(*a*) whether they have received any representation requesting to lay a Railway line *via* Kadur-Chickmagalur-Mudigere-Sakleshpura so as to link Hassan-Mangalore Railway line ;

(*b*) the steps taken by them in this behalf ?

A.—Sri G. B. SHANKAR RAO (Parliamentary Secretary to the Minister for Public Works).—

(*a*) Yes.

(*b*) It is proposed to consider this matter after the work on the Mangalore-Hassan Railway line starts.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಹಾಸನ-ಮಂಗಳೂರು ರೈಲು ಮಾರ್ಗಕ್ಕೆ ಸೇರಿಸುವಂತೆ ಕಡೂರು-ಮೂಡಿಗೆರೆ-ಸಕಲೇಶಪುರ ಮಾರ್ಗವಾಗಿ ರೈಲು ಮಾರ್ಗವೊಂದನ್ನು ಏರ್ಪಡಿಸಬೇಕೆಂದು ಕೋರಿ ಮನವಿಯೇನಾದರೂ ಸರ್ಕಾರಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಬಂದಿದೆ ಎಂದು ಹೇಳಿದ್ದೀರಿ, ಅಂಥಾ ಮನವಿಗಳು ಸರ್ಕಾರಕ್ಕೆ ಎಷ್ಟು ವರ್ಷಗಳಿಂದ ಬರುತ್ತಿವೆ ? ಈ ಬಗ್ಗೆ ಸರ್ಕಾರ ದವರು ಏನಾದರೂ ಕ್ರಮವನ್ನು ಕೈಗೊಂಡಿದ್ದಾರೆಯೇ ?

ಶ್ರೀ ಜಿ. ಬಿ. ಶಂಕರರಾವ್.—1955ನೇ ಇಸವಿಯಿಂದಲೂ ಸರ್ಕಾರಕ್ಕೆ ಮನವಿಗಳು ಬರುತ್ತಿವೆ. ಹಾಸನ-ಮಂಗಳೂರು ರೈಲ್ವೆ ಲೈನನ್ನು ಹಾಕಿಸಬೇಕೆಂದು ಕೇಳಿದಾಗಿನಿಂದಲೂ ಆ ಲೈನನ್ನೂ ಹಾಕಿಸಿಕೊಡಬೇಕೆಂದು ಕೇಂದ್ರ ಸರ್ಕಾರದವರನ್ನು ಒತ್ತಾಯ ಮಾಡುತ್ತಿದ್ದೇವೆ. ಮತ್ತು ಆ ಬಗ್ಗೆ ಅವರೊಡನೆ ಆಲೋಚನೆಯನ್ನು ಕೂಡ ಮಾಡಿದ್ದೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಆ ಲೈನಿನ ಸರ್ವೆ ಏನಾದರೂ ನಡೆದಿದೆಯೇ ? ಅದರ ವರದಿಯನ್ನೇನಾದರೂ ಕೇಂದ್ರ ಸರ್ಕಾರದಿಂದ ತರಿಸಿಕೊಂಡಿದ್ದೀರಾ ?

ಶ್ರೀ ಜಿ. ಬಿ. ಶಂಕರರಾವ್.—1955ನೇ ಇಸವಿಯಲ್ಲಿಯೇ ಟ್ರಾಫಿಕ್ ಸರ್ವೆ ಆಗಿದೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—(b)ಗೆ ಉತ್ತರವಾಗಿ ಮಂಗಳೂರು-ಹಾಸನ ರೈಲು ಮಾರ್ಗಕ್ಕೆ ಸಂಬಂಧಿಸಿದ ಕಾಮಗಾರಿಗಳನ್ನು ಪ್ರಾರಂಭಿಸಿದನಂತರ ಈ ವಿಷಯವನ್ನು ಪರಿಶೀಲಿಸಲಾಗುವುದು ಎಂದು ಹೇಳಿದ್ದೀರಿ, ಮಂಗಳೂರು-ಹಾಸನ ರೈಲು ಮಾರ್ಗ ಪ್ರಾರಂಭವಾಗುವುದಕ್ಕೆ ಮುಂಚೆಯೇ ಚಿಕ್ಕಮಗಳೂರು-ಮೂಡಿಗೆರೆ-ಸಕಲೇಶಪುರ ಲೈನನ್ನು ಪರಿಶೀಲನೆ ಮಾಡುವುದಕ್ಕೆ ಏನು ಅನಾನುಕೂಲ ಇದೆ ?

ಶ್ರೀ ಜಿ. ಬಿ. ಶಂಕರರಾವ್.—ಕೇಂದ್ರ ಸರ್ಕಾರದವರು ಹಾಸನ-ಮಂಗಳೂರು ರೈಲ್ವೆ ಲೈನನ್ನು ಪ್ರಾರಂಭ ಮಾಡುವುದಕ್ಕೇ ಇಷ್ಟು ವರ್ಷಗಳಕಾಲ ಆಯಿತು. ಇನ್ನೊಂದು ರೈಲ್ವೆ ಲೈನನ್ನು ಹೇಳಿದರೆ ಆಗುವುದಿಲ್ಲ ಎಂದು ನಾವು ಅದನ್ನು ಕೇಳಲಿಲ್ಲ.

Sri G. V. GOWDA.—In view of the fact that the Mangalore-Hassan railway line has become a certainty, what is the impediment to consider this proposal ?

Sri G. B. SHANKARA RAO.—It has no doubt become a certainty but this can be taken up only after the Government of India gives sanction to the construction of the line.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಮಲೆನಾಡಿನಿಂದ ಬೇರೆ ಪ್ರದೇಶಗಳಿಗೆ ಕಾಫೀ, ಏಲಕ್ಕಿ, ಬತ್ತ, ತೇಗದ ಮರ ಇವುಗಳನ್ನು ಸಾಗಿಸಬೇಕಾಗುತ್ತದೆ. ಸುಮಾರು 100 ಮಿಲಿಯನ್‌ನಷ್ಟು ಕಬ್ಬಿಣದ ಅದಿರು ಮಲೆನಾಡಿನಿಂದ ಬೇರೆ ಕಡೆಗೆ ರಫ್ತಾಗುತ್ತದೆ. ಈ ಎಲ್ಲಾ ದೃಷ್ಟಿಯಿಂದಲೂ ಹಾಸನ-ಮಂಗಳೂರು ರೈಲು ಮಾರ್ಗಕ್ಕೆ ಸೇರಿಸುವಂತೆ ಕಡೂರು-ಚಿಕ್ಕಮಗಳೂರು-ಮೂಡಿಗೆರೆ-ಸಕಲೇಶಪುರ ಮಾರ್ಗವಾಗಿ ರೈಲು ಮಾರ್ಗವೊಂದನ್ನು ಏರ್ಪಡಿಸುವುದು ಉತ್ತಮವಾಗಿದೆ. ಆದ್ದರಿಂದ ಇದನ್ನು ನಾಲ್ಕನೇಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವುದಕ್ಕೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್.—ಅದನ್ನು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ತೋರಿಸುವುದಕ್ಕೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತೇವೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಚಿಕ್ಕಮಗಳೂರು-ಮೂಡಿಗೆರೆ-ಸಕಲೇಶಪುರದ ರೈಲ್ವೆ ಲೈನಿನ ಸರ್ವೆ ಕಾರ್ಯವನ್ನು ಮಾಡುವಾಗ ಬೇಲೂರು ಮಾರ್ಗವಾಗಿ ರೈಲ್ವೆ ಲೈನನ್ನು ಹಾಕುವ ಸಂಬಂಧದಲ್ಲಿ ಅದನ್ನೂ ಸಹ ಸರ್ವೇ ಮಾಡುವುದಕ್ಕಾಗಿ ಅದರಲ್ಲಿ ಸೇರಿಸುವುದು ಒಳ್ಳೆಯದಲ್ಲವೇ ?

ಶ್ರೀ ಜಿ. ಬಿ. ಶಂಕರರಾವ್.—ಮೊದಲು ಈ ಕೆಲಸ ಆಗಲಿ. ಆಮೇಲೆ ಅದನ್ನು ನೋಡೋಣ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಮಂಗಳೂರು-ಹಾಸನ ರೈಲ್ವೆ ಲೈನನ್ನು ಹಾಸನದಲ್ಲೇ ನಿಲ್ಲಿಸುವುದಕ್ಕೆ ಬದಲಾಗಿ ಅಲ್ಲಿಂದ ಮುಂದಕ್ಕೆ ತೆಗೆದುಕೊಂಡು ಬಂದು ತಿಪಟೂರಿಗೆ ಸೇರಿಸಿದರೆ ಒಳ್ಳೆಯದಲ್ಲವೇ ?

Mr. SPEAKER.—Has Sri Keshava Murthy consulted the Hon. Member from Tiptur Constituency ? (*Laughter*).